All India Radio: Bangalore
National Bulletin In Kannada
02.06.2025  07.35 a.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**<><><><>**

ಮುಖ್ಯಾಂಶಗಳು

- ನವದೆಹಲಿಯಲ್ಲಿಂದು ಅಂತಾರಾಷ್ಟ್ರೀಯ ವಿಮಾನ ಸಾರಿಗೆ ಸಂಘಟನೆಯ ೮೧ನೇ ವಾರ್ಷಿಕ ಮಹಾಸಭೆಯಲ್ಲಿ ಪ್ರಧಾನಿ ಭಾಗಿ
- ಕೃಷಿ ಭಾರತದ ಆರ್ಥಿಕತೆಯ ಅತಿದೊಡ್ಡ ಶಕ್ತಿ - ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್
- ಮೇ ತಿಂಗಳಲ್ಲಿ ೨ ಲಕ್ಷ ಕೋಟಿ ರೂಪಾಯಿಗಳ ಗಡಿ ದಾಟಿದ ಜಿಎಸ್‌ಟಿ ಸಂಗ್ರಹ
- ನಾರ್ವೆ ಚೆಸ್ ; ೬ನೇ ಸುತ್ತಿನಲ್ಲಿ ಮ್ಯಾಗ್ನಸ್ ಕಾರ್ಲ್‌ಸ್‌ನ್ ಸೋಲಿಸಿದ ವಿಶ್ವ ಚೆಸ್ ಚಾಂಪಿಯನ್ ಡಿ. ಗುಕೇಶ್
- ಐಪಿಎಲ್ ಟಿ-೨೦ ಕ್ರಿಕೆಟ್ ; ೨ನೇ ಕ್ವಾಲಿಫೈಯರ್‌ನಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ಗೆದ್ದು ಫೈನಲ್ ಪ್ರವೇಶಿಸಿದ ಪಂಜಾಬ್ ಕಿಂಗ್ಸ್

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಂದು ನವದೆಹಲಿಯ ಭಾರತ ಮಂಟಪದಲ್ಲಿ ನಡೆಯುವ ಅಂತಾರಾಷ್ಟ್ರೀಯ ವಿಮಾನ ಸಾರಿಗೆ ಸಂಘಟನೆ - ಐಎಟಿಎ ಯ ೮೧ನೇ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಲಿದ್ದಾರೆ. ಈ ಸಂದರ್ಭದಲ್ಲಿ ಅವರು ಸಭಿಕರನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ.

ಈ ಕುರಿತು ಒಂದು ವರದಿ (೩೪ ಸೆಂಕೆಡ್‌ಗಳು)

ನಿನ್ನೆ ಆರಂಭವಾದ ಐಎಟಿಎ ಕಾರ್ಯಕ್ರಮ ನಾಳೆ ಮುಕ್ತಾಯವಾಗಲಿದೆ. ವಿಶ್ವ ವಿಮಾನ ಸಾರಿಗೆ ಶೃಂಗಸಭೆಯಲ್ಲಿ ವಿಮಾನೋದ್ಯಮ ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಾದ ವಿಮಾನೋದ್ಯಮದ ಆರ್ಥಿಕತೆ, ವಿಮಾನ ಸಂಪರ್ಕ, ಇಂಧನ ಭದ್ರತೆ, ಸ್ಥಿರ ವಿಮಾನ ಇಂಧನ ಉತ್ಪಾದನೆ,

ಡಿಕಾರ್ಬನೈಜೇಶನ್‌ಗೆ ಹಣಕಾಸು ಮತ್ತು ನಾವೀನ್ಯತೆಗಳ ಕುರಿತ ಚರ್ಚೆ ನಡೆಯಲಿದೆ. ಪ್ರಧಾನಮಂತ್ರಿ ಕಾರ್ಯಾಲಯದ ಪ್ರಕಾರ, ಈ ಕಾರ್ಯಕ್ರಮದಲ್ಲಿ ಜಾಗತಿಕ ನಾಯಕರು ಭಾರತದ ವಿಮಾನೋದ್ಯಮ ಕ್ಷೇತ್ರದಲ್ಲಿ ಸಂಭವಿಸಿದ ಮಹತ್ವದ ಪರಿವರ್ತನೆ ಹಾಗೂ ದೇಶದ ಸಾಮಾಜಿಕ-ಆರ್ಥಿಕ ಬೆಳವಣಿಗೆಗೆ ಅದರ ಕೊಡುಗೆಗೆ ಸಾಕ್ಷಿಯಾಗಲಿದ್ದಾರೆ. ಐಎಟಿಎನ ವಾರ್ಷಿಕ ಸಭೆ ಕಳೆದ ಬಾರಿ ೧೯೮೩ರಲ್ಲಿ ನಡೆದಿತ್ತು.

<><><><>

ಕೃಷಿ ಭಾರತದ ಆರ್ಥಿಕತೆಯ ಅತಿದೊಡ್ಡ ಶಕ್ತಿ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ. ನವದೆಹಲಿಯಲ್ಲಿ ನಡೆದ ಪಂಡಿತ್ ದೀನ್‌ದಯಾಳ್ ಉಪಾಧ್ಯಾಯರ ಮಾನವತಾವಾದ ಭಾಷಣಗಳ ೬೦ನೇ ವಾರ್ಷಿಕ ಸ್ಮರಣಾರ್ಥ ರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿದ ಅವರು ಗ್ರಾಮೀಣ ಭಾಗದಲ್ಲಿ ಕಂಡುಬರುತ್ತಿರುವ ಬಡತನ ಹಾಗೂ ಜನರ ಜೀವನಮಟ್ಟದ ಸುಧಾರಣೆಯ ಕುರಿತು ಒತ್ತಿ ಹೇಳಿದರು. ಲಖಪತಿ ದಿದಿ ಯೋಜನೆ ಮಹಿಳಾ ಶಕ್ತೀಕರಣಕ್ಕೆ ಮಹತ್ವದ ಅಭಿಯಾನವಾಗಿದೆ ಎಂದ ಅವರು, ಹೊಸದಾಗಿ ಅಭಿವೃದ್ಧಿಪಡಿಸಿರುವ ಎರಡು ಬಗೆಯ ಭತ್ತದ ಬೀಜಗಳು ಶೇಕಡ ೩೦ ರಷ್ಟು ಹೆಚ್ಚು ಬೆಳೆಯುವುದಲ್ಲದೇ, ಶೇಕಡ ೨೦ ರಷ್ಟು ಕಡಿಮೆ ನೀರಿನ ಅಗತ್ಯವಿದೆ ಎಂದು ಹೇಳಿದರು.

ಧ್ವನಿ - ಶಿವರಾಜ್ ಸಿಂಗ್ ಚೌಹಾಣ್ (೨೨ ಸೆಂಕೆಡ್‌ಗಳು)

<><><><>

ಭಾರತದ ಒಟ್ಟು ಸರಕು ಮತ್ತು ಸೇವಾ ತೆರಿಗೆ - ಜಿಎಸ್‌ಟಿ ಸಂಗ್ರಹ ಮೇ ತಿಂಗಳಲ್ಲಿ ಸತತ ಎರಡನೇ ತಿಂಗಳು ೨ ಲಕ್ಷ ಕೋಟಿ ರೂಪಾಯಿಗಳ ಗಡಿಯನ್ನು ದಾಟಿದೆ. ಕೇಂದ್ರ ಹಣಕಾಸು ಸಚಿವಾಲಯ ಬಿಡುಗಡೆ ಮಾಡಿದ ಮಾಹಿತಿಯ ಪ್ರಕಾರ, ಮೇ ತಿಂಗಳಲ್ಲಿ ಒಟ್ಟು ಜಿಎಸ್‌ಟಿ ಸಂಗ್ರಹ ೨.೦೧ ಲಕ್ಷ ಕೋಟಿ ರೂಪಾಯಿಗಳಾಗಿದ್ದು, ಇದು ಮೇ ೨೦೨೪ ರಲ್ಲಿ ಸಂಗ್ರಹವಾದ ೧.೭೨ ಲಕ್ಷ ಕೋಟಿ ರೂಪಾಯಿಗಳಿಗೆ ಹೋಲಿಸಿದರೆ ಶೇಕಡ ೧೬.೪ ರಷ್ಟು ಹೆಚ್ಚಾಗಿದೆ. ಏಪ್ರಿಲ್ ೨೦೨೫ ರಲ್ಲಿ, ಭಾರತದ ಜಿಎಸ್‌ಟಿ ಸಂಗ್ರಹ ಶೇಕಡ ೧೨.೬ ರಷ್ಟು ಹೆಚ್ಚಾಗಿ ೨.೩೭ ಲಕ್ಷ ಕೋಟಿ ರೂಪಾಯಿಗಳಿಗೆ ತಲುಪಿದೆ.

ಈ ಕುರಿತು ಒಂದು ವರದಿ (೪೪ ಸೆಂಕೆಡ್‌ಗಳು)

ಮೇ ತಿಂಗಳಲ್ಲಿ ವರ್ಷದಿಂದ ವರ್ಷಕ್ಕೆ ಬೆಳವಣಿಗೆ ಆಮದುಗಳಿಂದ ಸಂಗ್ರಹಿಸಲಾದ ಜಿಎಸ್‌ಟಿಯಲ್ಲಿ ಶೇಕಡ ೨೫.೨ ರಷ್ಟು ಏರಿಕೆ ಮತ್ತು ದೇಶೀಯ ವಹಿವಾಟುಗಳಿಂದ ಶೇಕಡ ೧೩.೭ ರಷ್ಟು ಏರಿಕೆಯಿಂದ ಉಂಟಾಗಿದೆ. ಆಮದುಗಳಿಂದ ಒಟ್ಟು ಜಿಎಸ್‌ಟಿ ಆದಾಯ ೫೧ ಸಾವಿರದ ೨೬೬ ಕೋಟಿ ರೂಪಾಯಿಗಳಾಗಿದ್ದರೆ, ದೇಶೀಯ ಮೂಲಗಳು ೧.೫೦ ಲಕ್ಷ ಕೋಟಿ ರೂಪಾಯಿಗಳ ಕೊಡುಗೆ ನೀಡಿವೆ. ಮರುಪಾವತಿಯ ನಂತರ, ಮೇ ತಿಂಗಳ ನಿವ್ವಳ ಜಿಎಸ್‌ಟಿ ಆದಾಯ ೧.೭೪ ಲಕ್ಷ ಕೋಟಿಗಳಾಗಿದ್ದು, ಇದು ಮೇ ೨೦೨೪ ರಲ್ಲಿ ಸಂಗ್ರಹಿಸಲಾದ ೧.೪೪ ಲಕ್ಷ ಕೋಟಿ ರೂಪಾಯಿಗಳಿಗೆ ಹೋಲಿಸಿದರೆ ಶೇ. ೨೦.೪ ರಷ್ಟು ಹೆಚ್ಚಾಗಿದೆ. ತಿಂಗಳ ಒಟ್ಟು ಮರುಪಾವತಿಗಳು ೨೭,೨೧೦ ಕೋಟಿ ರೂಪಾಯಿಗಳಾಗಿದ್ದು, ಇದು ವರ್ಷದಿಂದ ವರ್ಷಕ್ಕೆ ಶೇಕಡ ೪ ರಷ್ಟು ಕಡಿಮೆಯಾಗಿದೆ.

<><><><>

ಬಂದರು, ನೌಕಾಯಾನ ಮತ್ತು ಜಲಮಾರ್ಗಗಳ ಕೇಂದ್ರ ಸಚಿವ ಸರ್ಬಾನಂದ ಸೊನೋವಾಲ್, ಇಂದಿನಿಂದ ನಾರ್ವೆ ಮತ್ತು ಡೆನ್ಮಾರ್ಕ್‌ಗೆ ಐದು ದಿನಗಳ ಅಧಿಕೃತ ಭೇಟಿಗೆ ಪ್ರಯಾಣ ಬೆಳೆಸಲಿದ್ದಾರೆ. ನಾರ್ವೆ ರಾಜಧಾನಿಯಾದ ಒಸ್ಲೋದಲ್ಲಿ ನಡೆಯುತ್ತಿರುವ ೬೦ನೇ ಆವೃತ್ತಿಯ ನಾರ್-ಶಿಪಿಂಗ್ ಕಾರ್ಯಕ್ರಮದ ಸಂದರ್ಭದಲ್ಲಿ, ಅವರು ಮಹಾಸಾಗರಗಳ ಕುರಿತ ಉನ್ನತ ಮಟ್ಟದ ಸಭೆಯಲ್ಲಿ ಭಾಗವಹಿಸಲಿದ್ದಾರೆ ಮತ್ತು ಮೊದಲ 'ಇಂಡಿಯಾ ಪೆವಿಲಿಯನ್' ಅನ್ನು ಉದ್ಘಾಟಿಸಲಿದ್ದಾರೆ. ಈ 'ಇಂಡಿಯಾ ಪೆವಿಲಿಯನ್‌ನಲ್ಲಿ' ರಾಷ್ಟ್ರೀಯ ಕಡಲ ಪರಂಪರೆ ಸಂಕೀರ್ಣವನ್ನೊಳಗೊಂಡು ಭಾರತದ ಐದು ಸಾವಿರ ವರ್ಷದ ನೌಕಾಯಾನ ಪರಂಪರೆ ಮತ್ತು ಜಾಗತಿಕ ಸಂಪರ್ಕಗಳ ಬಗ್ಗೆ ಅಂತರಾಷ್ಟ್ರೀಯ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. ಇದರ ಜೊತೆಗೆ, ಅವರು ಇಂಡಿಯಾ @ ನಾರ್ ಶಿಪ್ಪಿಂಗ್ ಅಧಿವೇಶನದ ಅಧ್ಯಕ್ಷತೆ ವಹಿಸಲಿದ್ದು, ಮುಂಬೈನಲ್ಲಿ ಅಕ್ಟೋಬರ್ ೨೭ರಿಂದ ೩೧ರವರೆಗೆ ನಡೆಯಲಿರುವ 'ಭಾರತ ಕಡಲ ಸಪ್ತಾಹ-೨೦೨೫'ಕ್ಕೆ ಈ ಕಾರ್ಯಕ್ರಮ ಜಾಗತಿಕ ಸಂಪರ್ಕ ಸಾಧನವಾಗಲಿದೆ. ಈ ನಡುವೆ ಅವರು ನಾರ್ವೆ ಮತ್ತು ಜಪಾನ್‌ನ ಸಚಿವರೊಂದಿಗೆ ದ್ವಿಪಕ್ಷೀಯ ಚರ್ಚೆಗಳನ್ನು ನಡೆಸಲಿದ್ದಾರೆ.

<><><><>

ಪರಾಗ್ವೆ ಅಧ್ಯಕ್ಷ ಸ್ಯಾಂಟಿಯಾಗೊ ಪೆನಾ ಪಲಾಸಿಯೊಸ್ ಇಂದು ಭಾರತಕ್ಕೆ ಮೂರು ದಿನಗಳ ಭೇಟಿಗಾಗಿ ಆಗಮಿಸುತ್ತಿದ್ದಾರೆ. ಅವರೊಂದಿಗೆ ಸಚಿವರು, ಹಿರಿಯ ಅಧಿಕಾರಿಗಳು ಮತ್ತು ವ್ಯಾಪಾರ ಪ್ರತಿನಿಧಿಗಳು ಸೇರಿದಂತೆ ಉನ್ನತ ಮಟ್ಟದ ನಿಯೋಗವೂ ಬರಲಿದೆ. ಈ ಭೇಟಿಯ ಸಮಯದಲ್ಲಿ, ಎರಡೂ ದೇಶಗಳ ದ್ವಿಪಕ್ಷೀಯ ಸಂಬಂಧಗಳ ಸಮಗ್ರ ಪರಿಶೀಲನೆಯನ್ನು ಕೈಗೊಳ್ಳುವ ನಿರೀಕ್ಷೆಯಿದೆ. ಇದು ಪೆನಾ ಅವರ ಭಾರತದ ಮೊದಲ ಭೇಟಿಯಾಗಿದ್ದು, ಪರಾಗ್ವೆ ಅಧ್ಯಕ್ಷರ ಎರಡನೇ ಭೇಟಿಯಾಗಲಿದೆ ಎಂದು ವಿದೇಶಾಂಗ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ಅವರ ಭೇಟಿಯ ಮೊದಲ ದಿನದಂದು, ಅಧ್ಯಕ್ಷ ಪೆನಾ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ, ಈ ಸಮಯದಲ್ಲಿ ಇಬ್ಬರೂ ನಾಯಕರು ದ್ವಿಪಕ್ಷೀಯ ಸಂಬಂಧಗಳ ಸಂಪೂರ್ಣ ವ್ಯಾಪ್ತಿಯನ್ನು ಪರಿಶೀಲಿಸಲಿದ್ದಾರೆ. ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪ ರಾಷ್ಟ್ರಪತಿ ಜಗದೀಪ್ ಧಂಕರ್ ಮತ್ತು ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಅವರನ್ನು ಸಹ ಭೇಟಿ ಮಾಡಲಿದ್ದಾರೆ. ಪೆನಾ ಬುಧವಾರ ಪರಾಗ್ವೆಗೆ ಮರಳುವ ಮೊದಲು ಮುಂಬೈಗೆ ಭೇಟಿ ನೀಡಲಿದ್ದಾರೆ. ಮುಂಬೈನಲ್ಲಿ ಅವರು ರಾಜ್ಯ ರಾಜಕೀಯ ನಾಯಕರು, ವ್ಯಾಪಾರ ಮತ್ತು ಕೈಗಾರಿಕೆಗಳ ಪ್ರತಿನಿಧಿಗಳು ಹಾಗೂ ತಂತ್ರಜ್ಞಾನ ಕ್ಷೇತ್ರದ ಪ್ರಮುಖರನ್ನು ಭೇಟಿ ಮಾಡಲಿದ್ದಾರೆ. ಭಾರತ ಮತ್ತು ಪರಾಗ್ವೆ ೧೯೬೧ ರಲ್ಲಿ ರಾಜತಾಂತ್ರಿಕ ಸಂಬಂಧಗಳನ್ನು ಸ್ಥಾಪಿಸಿದವು, ದಶಕಗಳಿಂದ ವ್ಯಾಪಾರ, ಕೃಷಿ, ಆರೋಗ್ಯ, ಔಷಧ ಮತ್ತು ಮಾಹಿತಿ ತಂತ್ರಜ್ಞಾನ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಎರಡೂ ದೇಶಗಳು ಸಹಕಾರವನ್ನು ಬೆಳೆಸಿಕೊಂಡಿವೆ. ಲ್ಯಾಟಿನ್ ಅಮೇರಿಕನ್ ಪ್ರದೇಶದಲ್ಲಿ ಭಾರತದ ಪ್ರಮುಖ ವ್ಯಾಪಾರ ಪಾಲುದಾರ ಪರಾಗ್ವೆ. ಆಟೋ-ಮೊಬೈಲ್ ಮತ್ತು ಔಷಧೀಯ ವಲಯದಲ್ಲಿ ಹಲವಾರು ಭಾರತೀಯ ಕಂಪನಿಗಳು ಪರಾಗ್ವೆಯಲ್ಲಿ ತಮ್ಮ ಅಸ್ತಿತ್ವವನ್ನು ಹೊಂದಿವೆ. ಪರಾಗ್ವೆಯ ಕಂಪನಿಗಳು ಭಾರತದಲ್ಲಿಯೂ ತಮ್ಮ ಅಸ್ತಿತ್ವವನ್ನು ಹೊಂದಿದ್ದು, ಎರಡೂ ರಾಷ್ಟ್ರಗಳ ನಡುವಿನ ಆರ್ಥಿಕ ಸಂಬಂಧಗಳಿಗೆ ಕೊಡುಗೆ ನೀಡುತ್ತಿವೆ.

ವಿಶ್ವಸಂಸ್ಥೆಯ ಸುಧಾರಣೆಗಳು, ಹವಾಮಾನ ಬದಲಾವಣೆ, ನವೀಕರಿಸಬಹುದಾದ ಇಂಧನ ಮತ್ತು ಭಯೋತ್ಪಾದನೆಯನ್ನು ಎದುರಿಸುವುದು ಸೇರಿದಂತೆ ವಿವಿಧ ಅಂತರರಾಷ್ಟ್ರೀಯ ವಿಷಯಗಳ ಕುರಿತು ಎರಡೂ ದೇಶಗಳು ಸಾಮಾನ್ಯ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತವೆ.

<><><><>

ಸಿಕ್ಕಿಂ ಸರ್ಕಾರ ೫ ವರ್ಷಗಳ ಬಳಿಕ ಪುನಃ ಕೈಲಾಶ್ ಮಾನಸ ಸರೋವರ ಯಾತ್ರೆಗೆ ಸಜ್ಜಾಗಿದೆ. ಯಾತ್ರೆಯ ಮೊದಲ ತಂಡ ಇದೇ ೧೫ರಂದು ಗ್ಯಾಂಗ್ಟೋಕ್‌ನಲ್ಲಿ ಆಗಮಿಸುವ ಮೂಲಕ ಆರಂಭವಾಗಲಿದೆ. ಸಿಕ್ಕಿಂ ಸರಕಾರದ ಪ್ರವಾಸೋದ್ಯಮ ಮತ್ತು ನಾಗರಿಕ ವಿಮಾನಯಾನ ಇಲಾಖೆ ಪ್ರಧಾನ ಕಾರ್ಯದರ್ಶಿ ಸಿ.ಎಸ್. ರಾವ್ ಈ ಮಾಹಿತಿ ನೀಡಿದ್ದಾರೆ. ಯಾತ್ರೆ ಗ್ಯಾಂಗ್ಟೋಕ್‌ನಿಂದ ನಾಥುಲಾ ಮೂಲಕ ಚೀನಾದ ಪ್ರದೇಶಕ್ಕೆ ಪ್ರವೇಶಿಸಿ ಕೈಲಾಸ ಮತ್ತು ಮಾನಸ ಸರೋವರ ತಲುಪಲಿದೆ. ಯಾತ್ರಾರ್ಥಿಗಳು ಇದೇ ೧೧ರಂದು ದೆಹಲಿಯಲ್ಲಿ ವರದಿ ಮಾಡಬೇಕು ಹಾಗೂ ವೈದ್ಯಕೀಯ ಪರೀಕ್ಷೆ ಮತ್ತು ಅಗತ್ಯ ಅನುಮತಿಗಳನ್ನು ಪಡೆಯಬೇಕು. ಪ್ರತಿಯೊಂದು ತಂಡದಲ್ಲಿ ೪೮ ಯಾತ್ರಾರ್ಥಿಗಳು, ಗ್ಯಾಂಗ್ಟೋಕ್‌ನಲ್ಲಿ ಪೂರ್ವ ಯಾತ್ರಾ ಶಿಬಿರ, ಯೋಗ, ವ್ಯಾಯಾಮ, ಧ್ಯಾನ ಕಾರ್ಯಕ್ರಮಗಳು ಇರುತ್ತವೆ. ಸಿಕ್ಕಿಂ ಸರ್ಕಾರವು ಊಟ, ವಸತಿ, ವೈದ್ಯಕೀಯ ಮತ್ತು ತುರ್ತು ಸೇವೆಗಳ ವ್ಯವಸ್ಥೆ ಮಾಡಲಿದ್ದು, ಯಾತ್ರೆ ಸುಮಾರು ೨೦ ರಿಂದ ೨೧ ದಿನಗಳವರೆಗೆ ನಡೆಯಲಿದೆ.

<><><><>

ಯುಕ್ರೇನ್ ನಿನ್ನೆ ರಷ್ಯಾ ಮೇಲೆ ದೊಡ್ಡ ಮಟ್ಟದ ಡ್ರೋನ್ ದಾಳಿ ನಡೆಸಿದ್ದು, ಮುರ್ಮಾನ್ಸ್ಕ್, ಇರ್ಕುಟ್ಸ್ಕ್, ಇವಾನೊವೋ, ರೆಜಾನ್ ಮತ್ತು ಅಮೂರ್ ಪ್ರದೇಶಗಳಲ್ಲಿನ ಐದು ರಷ್ಯಾ ವಾಯುನೆಲೆಗಳನ್ನು ಗುರಿಯಾಗಿಸಿಕೊಂಡಿದೆ. ರಷ್ಯಾ ರಕ್ಷಣಾ ಸಚಿವಾಲಯ ದಾಳಿಗಳನ್ನು ಖಚಿತಪಡಿಸಿದ್ದು, ಕೆಲ ವಿಮಾನಗಳಿಗೆ ಬೆಂಕಿ ತಗುಲಿದರೂ ಯಾವುದೇ ಸಾವು-ನೋವು ವರದಿಯಾಗಿಲ್ಲ ಎಂದಿದೆ. ಯುಕ್ರೇನ್ ಪ್ರಕಾರ, ಈ ದಾಳಿಯು ೧೧ ತಿಂಗಳ ಯೋಜನೆಯ ಫಲವಾಗಿದೆ ಮತ್ತು ೪೦ಕ್ಕೂ ಹೆಚ್ಚು ವಿಮಾನಗಳನ್ನು ನಾಶಪಡಿಸಲಾಗಿದೆ.

<><><><>

ವಿಶ್ವ ಚೆಸ್ ಚಾಂಪಿಯನ್ ಡಿ. ಗುಕೇಶ್ ಅವರು ನಿನ್ನೆ ನಾರ್ವೇ ಚೆಸ್ ಟೂರ್ನಿಯ ೬ನೇ ಸುತ್ತಿನಲ್ಲಿ ಮಾಜಿ ವಿಶ್ವ ಅಗ್ರ ಶ್ರೇಯಾಂಕಿತ ಮ್ಯಾಗ್ನಸ್ ಕಾರ್ಲ್ಸನ್ ಅವರನ್ನು ಸೋಲಿಸಿದ್ದಾರೆ. ಇದು ಗುಕೇಶ್ ಅವರ ಕಾರ್ಲ್ಸನ್ ವಿರುದ್ಧದ ಮೊದಲ ಕ್ಲಾಸಿಕಲ್ ಗೆಲುವಾಗಿದೆ. ಈ ಟೂರ್ನಿಯು ಮೇ ೨೬ರಿಂದ ಜೂನ್ ೬ರವರೆಗೆ ನಡೆಯುತ್ತಿದ್ದು, ೬ ಆಟಗಾರರ ಡಬಲ್ ರೌಂಡ್-ರಾಬಿನ್ ಶೈಲಿಯಲ್ಲಿದೆ.

<><><><>

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಕಳೆದ ರಾತ್ರಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯಾವಳಿಯ ೨ನೇ ಕ್ವಾಲಿಫೈಯರ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡ ಮುಂಬೈ ಇಂಡಿಯನ್ಸ್ ವಿರುದ್ಧ ೫ ವಿಕೆಟ್‌ಗಳಿಂದ ಗೆಲುವು ಸಾಧಿಸಿ ಫೈನಲ್ ಪ್ರವೇಶಿಸಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>